ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/138/ಕ.ಅ.ಶಿ/2019-20

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಅರಮನೆ ರಸ್ತೆ, ಬೆಂಗಳೂರು – 01.
ದಿನಾಂಕ:29/07/2019.

# ಸುತ್ತೋಲೆ

ವಿಷಯ: ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಪ್ರೊ. ಎಸ್. ಜಿ. ಸಿದ್ಧರಾಮಯ್ಯ, ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ರವರ ಪತ್ರ ಸಂಖ್ಯೆ:ಕಅಪ್ರಾ/ಅ/1425/2019 ದಿನಾಂಕ:03.04.2019.

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಭಾರತೀಯ ಪ್ರಾದೇಶಿಕ ಭಾಷೆಗಳಲ್ಲಿ ಕನ್ನಡ ಭಾಷೆಯು ಅತ್ಯಂತ ಪ್ರಾಚೀನ ಭಾಷೆಗಳಲ್ಲೊಂದು. ರಾಜ್ಯದ ಆಡಳಿತ ಭಾಷೆಯಾಗಿರುವ ಕನ್ನಡವು ಉನ್ನತ ಶಿಕ್ಷಣದಲ್ಲಿ ಸಂಪೂರ್ಣವಾಗಿ ಬಳಕೆಯಾದಲ್ಲಿ ಮಾತ್ರ ಉಳಿಯಲು ಸಾಧ್ಯವಾಗುತ್ತದೆ. ಹಾಗಾಗಿ ಶಿಕ್ಷಣ ವಲಯದಲ್ಲಿ ಕನ್ನಡವನ್ನು ಕಡ್ಡಾಯವಾಗಿ ಬೋಧಿಸುವುದು ಅಗತ್ಯವಾಗಿರುತ್ತದೆ. ಅಂತೆಯೇ ಶಿಕ್ಷಣ ವಲಯದ ಆಡಳಿತ ವ್ಯವಸ್ಥೆಯಲ್ಲಿ ಸಂಪೂರ್ಣವಾಗಿ ಕನ್ನಡವನ್ನು ಕಡ್ಡಾಯವಾಗಿ ಜಾರಿಗೊಳಿಸಬೇಕಾಗಿರುತ್ತದೆ. ಈ ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಪದವಿ ಕಾಲೇಜುಗಳಲ್ಲಿ ಕೆಳಕಾಣಿಸಿದ ಕೆಲವು ತುರ್ತುಕ್ರಮಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ರವರು ಉಲ್ಲೇಖಿತ ಪತ್ರದಲ್ಲಿ ತಿಳಿಸಿರುವ ಅಂಶಗಳಿಗೆ ಅಗತ್ಯ ಕ್ರಮಕೈಗೊಳ್ಳಲು ಸೂಚಿಸಲಾಗಿದೆ.

1. ಕಛೇರಿ / ಕಾಲೇಜುಗಳು ನಡೆಸುವ ರಾಜ್ಯ ಮಟ್ಟದ / ರಾಷ್ಟ್ರಮಟ್ಟದ ವಿಚಾರ ಸಂಕಿರಣ/ ಕಾರ್ಯಾಗಾರ/ ಅಧ್ಯಯನ ಪ್ರವಾಸ/ವಿಶೇಷ ಉಪನ್ಯಾಸ ಮುಂತಾದ ಎಲ್ಲಾ ಕಾರ್ಯಕ್ರಮಗಳ ಬ್ಯಾನರ್/ ಆಮಂತ್ರಣ ಪತ್ರಿಕೆ/ಬ್ರೋಚರ್/ಪ್ರಮಾಣ ಪತ್ರಗಳಲ್ಲಿ ಕನ್ನಡವನ್ನು ಪ್ರಧಾನವಾಗಿ ಬಳಸುವುದು.
2. ಕಛೇರಿ / ಕಾಲೇಜುಗಳು ನೀಡುವ ಜಾಹೀರಾತು / ಪ್ರಕಟಣೆಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ನಿಯಮದಂತೆ ಕಡ್ಡಾಯವಾಗಿ ಕನ್ನಡ ಪತ್ರಿಕೆಗೆ ಕನ್ನಡದಲ್ಲಿ ನೀಡುವುದು.
3. ಕಛೇರಿ / ಕಾಲೇಜುಗಳು ಎಲ್ಲಾ ರೀತಿಯ ನಾಮಫಲಕಗಳಲ್ಲಿ ಕನ್ನಡವನ್ನು ಪ್ರಧಾನವಾಗಿ ಬಳಸುವುದು. (ವಿಷನ್, ಯುಜಿಸಿ ಅಧ್ಯಯನಗಳು, ಪ್ರಾಂಶುಪಾಲರ ಮತ್ತು ಉಪನ್ಯಾಸಕರ ಪಟ್ಟಿ ಇತ್ಯಾದಿ)
4. ಕಛೇರಿ / ಕಾಲೇಜುಗಳು ಹೊರಡಿಸುವ ಒಳಾಡಳಿತಕ್ಕೆ ಸಂಬಂಧಿಸಿದ ಆದೇಶ, ಸುತ್ತೋಲೆ, ಅಧಿಸೂಚನೆ, ಟಿಪ್ಪಣಿ, ನೇಮಕಾತಿ ಪಟ್ಟಿ, ವಿದ್ಯಾರ್ಥಿಗಳ ಆಯ್ಕೆ ಪಟ್ಟಿ, ಜೇಷ್ಠತಾ ಪಟ್ಟಿ, ಬೋಧಕ – ಬೋಧಕೇತರ ಸಿಬ್ಬಂದಿಗಳ ಪಟ್ಟಿ, ಪರೀಕ್ಷೆ ಹಾಗೂ ಇತರೆ ವೇಳಾಪಟ್ಟಿಗಳನ್ನು ಕಡ್ಡಾಯವಾಗಿ ಕನ್ನಡದಲ್ಲಿ ಹೊರಡಿಸುವುದು.

17/16



5. ಕಛೇರಿ / ಕಾಲೇಜುಗಳು ನೀಡುವ ಪ್ರಮಾಣ ಪತ್ರ, ಅಂಕಪಟ್ಟಿ ಮುಂತಾದವುಗಳಲ್ಲಿ ಇಂಗ್ಲೀಷ್‌ನೊಂದಿಗೆ ಕನ್ನಡವನ್ನೂ ಕಡ್ಡಾಯವಾಗಿ ಬಳಸುವುದು.
6. ಕಛೇರಿ / ಕಾಲೇಜುಗಳು ಹೊಂದಿರುವ ಅಧಿಕೃತ ಅಂತರ್ಜಾಲತಾಣದ ಮುಖಪುಟ (ಹೋಂಪೇಜ್) ಮತ್ತು ಒಳಮಾಹಿತಿಗಳನ್ನು ರಾಜ್ಯದ ಭಾಷಾ ನೀತಿಗೆ ಅನುಗುಣವಾಗಿ ಕನ್ನಡದಲ್ಲಿ ರೂಪಿಸುವುದು.
7. ಕಛೇರಿ / ಕಾಲೇಜುಗಳು ಮಕ್ಕಳಿಗೆ ಪರೀಕ್ಷೆಗಳನ್ನು ಕೇವಲ ಆಂಗ್ಲ ಮಾಧ್ಯಮದಲ್ಲಿ ಮಾತ್ರ ಬರೆಯುವಂತೆ ನಿರ್ಬಂಧಿಸದಿರುವುದು. ಪರೀಕ್ಷಾ ಮಾಧ್ಯಮವನ್ನು ಆಯಾ ಮಕ್ಕಳ ಆಯ್ಕೆಗೆ ಬಿಡುವುದು.
8. ಕಛೇರಿ / ಕಾಲೇಜುಗಳು ನಡೆಸುವ ಎಲ್ಲಾ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳನ್ನು ಕನ್ನಡ ಮತ್ತು ಇಂಗ್ಲೀಷ್‌ನಲ್ಲಿ ಅಂದರೆ ದ್ವಿಭಾಷೆಯಲ್ಲಿ ನೀಡುವುದು.
9. ಸಂಸ್ಥೆಯು ಹಮ್ಮಿಕೊಳ್ಳುವ ಸ್ವಾಗತ ಸಮಾರಂಭ, ಬೀಳ್ಕೊಡುಗೆ ಸಮಾರಂಭ ಹಾಗೂ ವಾರ್ಷಿಕ ಸ್ನೇಹ ಸಮ್ಮೇಳನ ಮುಂತಾದ ಎಲ್ಲಾ ಕಾರ್ಯಕ್ರಮಗಳಲ್ಲಿ ಪ್ರಧಾನವಾಗಿ ಕನ್ನಡವನ್ನು ಬಳಸುವುದು.
10. ಕಛೇರಿ / ಕಾಲೇಜುಗಳು ವಿದ್ಯಾರ್ಥಿಗಳಿಗೆ ಹಾಗೂ ಪ್ರಾಧ್ಯಾಪಕರುಗಳಿಗೆ ವಿತರಿಸುವ ಗುರುತಿನ ಚೀಟಿ/ಬ್ಯಾಚ್‌ಗಳಲ್ಲಿ ಕಡ್ಡಾಯಾಗಿ ಕನ್ನಡವನ್ನು ಬಳಸುವುದು.
11. ಕಛೇರಿ / ಕಾಲೇಜುಗಳು ಬಳಸುವ ಎಲ್ಲಾ ರೀತಿಯ ನಮೂನೆ ಮತ್ತು ಅರ್ಜಿಗಳನ್ನು ದ್ವಿಭಾಷೆ (ಕನ್ನಡ ಮತ್ತು ಇಂಗ್ಲೀಷ್)ಯಲ್ಲಿರುವಂತೆ ನೋಡಿಕೊಳ್ಳುವುದು (ಉದಾ: ಪ್ರವೇಶಾತಿ, ನೇಮಕಾತಿ, ಪರೀಕ್ಷಾ ವಿಭಾಗಗಳ ನಮೂನೆಗಳು ಇತ್ಯಾದಿ)
12. ಕಛೇರಿ / ಕಾಲೇಜುಗಳು ಬಳಸುವ ಅಧಿಕೃತ ಪತ್ರಗಳ ತಲೆಬರಹ/ಮೊಹರುಗಳಲ್ಲಿ ಕಡ್ಡಾಯವಾಗಿ ಕನ್ನಡ ಇರುವಂತೆ ನೋಡಿಕೊಳ್ಳುವುದು.
13. ಕನ್ನಡ ಭಾಷಾ ಬೋಧನೆಗೆ ತೊಂದರೆಯಾಗದಂತೆ ಸಿಬಿಸಿಎಸ್ ಪದ್ಧತಿಯನ್ನು ಅನುಷ್ಠಾನಗೊಳಿಸುವುದು.
14. ಕಛೇರಿ / ಕಾಲೇಜುಗಳು ಬೈಲಾವನ್ನು ಹೊಂದಿದ್ದಲ್ಲಿ ಕೂಡಲೇ ಅದನ್ನು ಕನ್ನಡಕ್ಕೆ ತುರ್ಜುಮೆಗೊಳಿಸಿ ಬಳಸುವುದು.

20/7/17

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ: ಮಾಹಿತಿ ಹಾಗೂ ಸೂಕ್ತ ಕ್ರಮಕ್ಕಾಗಿ:**

1) ಜಂಟಿ ನಿರ್ದೇಶಕರು, ಕಾಲೇಜು ಶಿಕ್ಷಣ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿ, ಬೆಂಗಳೂರು, ಮೈಸೂರು, ಮಂಗಳೂರು, ಶಿವಮೊಗ್ಗ, ಧಾರವಾಡ ಮತ್ತು ಕಲಬುರಗಿ- ಮಾಹಿತಿ ಹಾಗೂ ಅಗತ್ಯ ಕ್ರಮಕ್ಕಾಗಿ
2) ರಾಜ್ಯದ ಎಲ್ಲಾ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಕಾಲೇಜುಗಳ ಪ್ರಾಂಶುಪಾಲರುಗಳಿಗೆ – ಜಂಟಿ ನಿರ್ದೇಶಕರ ಮುಖಾಂತರ.

**ಪ್ರತಿಯನ್ನು:**

1. ಅಧ್ಯಕ್ಷರು, ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕೊಠಡಿ ಸಂಖ್ಯೆ 206, 2ನೇ ಮಹಡಿ, ವಿಧಾನ ಸೌಧ ಬೆಂಗಳೂರು 560001- ಮಾಹಿತಿಗಾಗಿ.
2. ಕಛೇರಿ ಪ್ರತಿ.